**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 963/2019
ಪಿಡಬ್ಲು :1 ಸಿಡಬ್ಲು :1

ಸಾಕ್ಷಿಯ ಹೆಸರು : ಶ್ರೀ ನೇಮಿನಾಥ ಲಕ್ಷ್ಮಣ ಬಾಬಣ್ಣವರ
ತಂದೆಯ ಹೆಸರು : ಶ್ರೀ ಲಕ್ಷ್ಮಣ ಬಾಬಣ್ಣವರ
ವಯಸ್ಸು : 52 ವರ್ಷ
ಉದ್ಯೋಗ : ಒಕ್ಕಲುತನ
ವಾಸ್ತವ್ಯ : ಮುಗಳಖೋಡ
ದಿನಾಂಕ : 10-01-2024 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ6 ರಿಂದ 8 ಮತ್ತು ಚಾಸಾ 10, ಚಾಸಾ11 ನನ್ನ ಕಾಕಂದಿರು. ಚಾಸಾಃ9 ನನ್ನ ಸಂಬಂಧಿಕರು. ಚಾಸಾಃ 12 ರಿಂದ ಚಾಸಾ 15, ಚಾಸಾ 17 ರಿಂದ ಚಾಸಾ 22 ರವರು ಪರಿಚಯ. ಚಾಸಾ 16 ಪರಿಚಯ ಇರುವುದಿಲ್ಲ. ಈ ಪ್ರಕರಣದ 17 ಜನ ಆರೋಪಿತರು ಪರಿಚಯ. ರಾಹುಸಾಬ ಬಾಬಣ್ಣವರವರ ಹೆಸರಿನಲ್ಲಿ ಮುಗಳಖೋಡದ ಊರಿನಲ್ಲಿ ಖುಲ್ಲಾ ಜಾಗ ಇರುತ್ತದೆ. ಅದರ ಸಂಖ್ಯೆ 643/ಅ/1 ಮತ್ತು 643/ಬ/1 ಇರುತ್ತದೆ. ಒಂದು 147 sqft ಇನ್ನೊಂದು 110 sqft ಇರುತ್ತವೆ. ಅದರ ಪಕ್ಕದಲ್ಲಿ ಸರ್ಕಾರಿ ಗಾಯರಾಣೆ ಜಾಗ ಇರುತ್ತದೆ ಮತ್ತು ಸದರಿ ಗಾಯರಾಣೆ ಜಾಗದಲ್ಲಿ ಕೆರೆ ಮತ್ತು ರಸ್ತೆ ಇರುತ್ತದೆ. ಸದರಿ ಗಾಯರಾಣೆ ಜಾಗದಲ್ಲಿ ಮಾದರ ಜನಾಂಗದವರು ಒತ್ತುವರಿ ಮಾಡಿಕೊಂಡು ಮನೆ ಕಟ್ಟಿಕೊಂಡಿರುತ್ತಾರೆ. ಅದೇ ರೀತಿ ನ್ಯಾಯಾಲಯದ ಮುಂದಿರುವ ಆರೋಪಿತರು ಸಹ ಸರ್ಕಾರಿ ಗಾಯರಾಣೆ ಜಾಗವನ್ನು ಒತ್ತುವರಿ ಮಾಡಿಕೊಂಡು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ನಮ್ಮ ಜಾಗದಲ್ಲಿ ಮನೆಯನ್ನು ಕಟ್ಟುತ್ತಿದ್ದೇವು, ಮನೆಯನ್ನು ಲಕ್ಷ್ಮಣ ಹನುಮಂತ ಬಾಬಣ್ಣವರ, ಶ್ರೀಮಂತ ನೇಮಣ್ಣ ಬಾಬಣ್ಣವರ, ರಾಹುಸಾಬ ಲಕ್ಷ್ಮಣ ಬಾಬಣ್ಣವರ ಕಟ್ಟುತ್ತಿದ್ದೇವು. ಸದರಿ ಜಾಗದಲ್ಲಿ ಮನೆಯನ್ನು ಕಟ್ಟಲು ಪುರಸಭೆಯಿಂದ ಪರವಾನಿಗೆಯನ್ನು ಲಕ್ಷ್ಮಣ ಹನುಮಂತ ಬಾಬಣ್ಣವರ, ಶ್ರೀಮಂತ ನೇಮಣ್ಣ ಬಾಬಣ್ಣವರ, ರಾಹುಸಾಬ ಲಕ್ಷ್ಮಣ ಬಾಬಣ್ಣವರ ಹೆಸರಿನಲ್ಲಿ ತೆಗೆದುಕೊಂಡಿದ್ದೇವು.

2. ದಿಃ 26.08.2017 ರಂದು ಪೂಜೆ ಮಾಡಿಸಿ ಮನೆ ಕಟ್ಟಲು ಪ್ರಾರಂಭ ಮಾಡಲು ಆ ದಿನ ಬೆಳಗ್ಗೆ 9.00 ಗಂಟೆಗೆ ನಾನು, ನಮ್ಮ ಸಂಬಂಧಿಕರಾದ ಶ್ರೀಕಾಂತ ಬಾಬಣ್ಣವರ, ಪವನಜಿ ಬಾಬಣ್ಣವರ, ಹನುಮಂತ ಬಾಬಣ್ಣವರ, ಅಜಿತ ಬಾಬಣ್ಣವರ, ಅರಿಹಂತ ಬಾಬಣ್ಣವರ ಮತ್ತು ಅಲ್ಲೆ ಊರಿನಲ್ಲಿ ಪರಿಚಯವಿರುವ ಮಿಲನ ಬಾಬು ದೇವಣ್ಣವರ ಮತ್ತು ಮಲ್ಲು ಲಕ್ಷ್ಮಣ ಕುರಾಳೆ ಇವರನ್ನು ಕರೆದುಕೊಂಡು ಆ ದಿನ ಬೆಳಗ್ಗೆ 9.00 ಗಂಟೆಯಿಂದ 11.00 ಗಂಟೆಯವರೆಗೆ ಸದರಿ ಜಾಗದಲ್ಲಿ ಪೂಜೆ ಮಾಡಿ ಸ್ವಚ್ಚ ಮಾಡಿಸುತ್ತಿದ್ದೇವು, ಆಗ ಅಲ್ಲಿಗೆ ಈ ಪ್ರಕರಣದ 17 ಜನ ಆರೋಪಿತರು ಕೈಯಲ್ಲಿ ಬಡಿಗೆ, ಕಲ್ಲು, ಕಬ್ಬಿಣದ ಚಡಿ ತೆಗೆದುಕೊಂಡು ಬಂದರು. ಆಗ ಅವರು ನಮ್ಮ ಹತ್ತಿರ ಬಂದು ಕೇಳಿದ್ದೇನೆಂದರೆ ಸದರಿ ಜಾಗವನ್ನು ನೀವು ನಮಗೆ ಬಿಟ್ಟು ಕೊಡಿ ಎಂದು ಕೇಳಿದ್ದು, ಆಗ ನಾವು ಅವರಿಗೆ ಹೇಳಿದ್ದೇನೆಂದರೆ ನಾವು ಪುರಸಭೆಯಿಂದ ಅನುಮತಿ ಪಡೆದು ಈ ಜಾಗದಲ್ಲಿ ಕಟ್ಟಡ ಕಟ್ಟಲು ಬಂದಿರುತ್ತೇವೆ, ನಿಮಗೆ ಈ ಜಾಗದಲ್ಲಿ ಅವಕಾಶ ಇಲ್ಲ ಎಂದು ಹೇಳಿದ್ದು, ಆಗ ಅವರು ನಮಗೆ ಹೇಳಿದ್ದೇನೆಂದರೆ ಈ ಜಾಗದಲ್ಲಿ ನಿಮಗೆ ಕಟ್ಟಡ ಕಟ್ಟಲು ಬಿಡುವುದಿಲ್ಲ ರಂಡೆ ಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಮತ್ತು ಇಲ್ಲಿ ಜಾಗ ಇದೆ ಎಂದು ನೀವು ಹಿಂತಿರುಗಿ ನೋಡಿದರೆ ನಿಮ್ಮನ್ನು ಬಿಡುವುದಿಲ್ಲ ಎಂದು ಹೇಳಿದ್ದು, ಆ ಸಂದರ್ಭದಲ್ಲಿ ನಾವು ಕೆಳಗಡೆ ಪಾಯ ತೆಗೆಯುವ ಕೆಲಸ ಮಾಡುತ್ತಿದ್ದೇವು, ಆಗ ಬಂದಂತಹ ಆರೋಪಿತರು ನಮ್ಮ ಮೇಲೆ ಕಲ್ಲುಗಳನ್ನು ಒಗೆಯಲು ಪ್ರಾರಂಭ ಮಾಡಿದರು, ಆರೋಪಿತರು ಒಗೆದಂತ ಕಲ್ಲು ನನ್ನ ತಲೆಗೆ ಬಿದ್ದು ಕಚ್ಚಾಯಿತು, ಶ್ರೀಕಾಂತ ಈತನ ಕಾಲಿಗೆ ಕಲ್ಲಿನಿಂದ ಕಚ್ಚಾಯಿತು, ಪೂನಂಜ ಇತನಿಗೆ ಎಡಗಣ್ಣಿನ ಮೇಲೆ ಕಲ್ಲಿನಿಂದ ಕಚ್ಚಾಯಿತು, ಸದರಿ ಕಲ್ಲನ್ನು ಚಿದಾನಂದ ಐಹೊಳೆ ಇವರು ಪೂನಂಜ ಇವರಿಗೆ ಹೊಡೆದಿರುತ್ತಾರೆ. 1 ನೇ ಆರೋಪಿಯು ಕಬ್ಬಿಣದ ಚಡಿಯಿಂದ ಅರಿಹಂತ ಬಾಬಣ್ಣವರ ಇವರಿಗೆ ಎರಡೂ ಕೈಗಳಿಗೆ ಹೊಡೆದಿದ್ದು, ಅದರಿಂದ ಆತನಿಗೆ ಗಾಯವಾಯಿತು. ಶ್ರೀಕಾಂತ ಇತನಿಗೆ 2 ನೇ ಆರೋಪಿ ಇತನು ಕಲ್ಲಿನಿಂದ ಎಡಗಾಲಿಗೆ ಕಚ್ಚು ಮಾಡಿರುತ್ತಾನೆ. ಆರೋಪಿತರ ಪೈಕಿ ಯಾರೊ ಒಬ್ಬರು ಪ್ರವೀಣ ಆದಪ್ಪಗೋಳ ಇತನಿಗೆ ಕಲ್ಲಿನಿಂದ ಒಗೆದಿದ್ದು ಇತ್ತು. ಆರೋಪಿತರ ಪೈಕಿ ಯಾರೋ ಒಬ್ಬರು ದಾಂಬೋದಿಂದ ನನ್ನ ಬಲಗಾಲ ಪಿಂಡರಗೆ ಹೊಡೆದರು.

3. ಆ ಸಂದರ್ಭದಲ್ಲಿ ಗಲಾಟೆಯನ್ನು ನೋಡಿ ಅಲ್ಲೆ ಕೆಲಸ ಮಾಡುತ್ತಿದ್ದಂತಹ ಚಾಸಾ 14 ಮತ್ತು 15 ರವರು ಜಗಳ ಬಿಡಿಸಲು ಬಂದಿದ್ದು, ಆಗ ಅವರ ಪೈಕಿ ಮಲ್ಲು ಕುರಾಡೆ ಇವರಿಗೆ ಯಾರೋ ಆರೋಪಿತರು ಕಲ್ಲು ಒಗೆದಿದ್ದರಿಂದ ಆತನ ಗದ್ದಕ್ಕೆ ಕಚ್ಚಾಯಿತು. ಮಿಲನ ದೇವನ್ನವರ ಇತನ ತಲೆಗೂ ಸಹ ಕಚ್ಚಾಗಿರುತ್ತದೆ. ಮತ್ತೆ ಜಗಳವನ್ನು ಬಿಡಿಸಲು ಚಾಸಾ 10, 12, 13 ಮತ್ತು ಇತರೆ 4 ಜನ ಬಂದ ಜಗಳ ಬಿಡಿಸಿದರು. ಸದರಿ ಜಗಳವನ್ನು ಬಿಡಿಸಲು ಬಂದ ಈ ಮೇಲೆ ಹೇಳಿದ ಎಲ್ಲರಿಗೂ ಸಹ ಕಚ್ಚಾಗಿದ್ದು, ಅವರಿಗೂ ಸಹ ಆರೋಪಿತರು ರಂಡೆ ಮಕ್ಕಳಾ, ಬೋಸಡಿ ಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಮತ್ತು ಇಲ್ಲಿ ಜಾಗ ಇದೆ ಎಂದು ನೀವು ತಿರುಗಿ ನೋಡಿದರೆ ನಿಮ್ಮನ್ನು ಕೊಂದೆ ಬಿಡುತ್ತೇವೆ ಎಂದು ಅಂದರು. ಆರೋಪಿತರು ನಮ್ಮನ್ನು ಬಡಿಯಲು ಉಪಯೋಗ ಮಾಡಿದಂತ ಎಲ್ಲಾ ವಸ್ತುಗಳನ್ನು ಬಿಸಾಕಿ ಹೊರಟು ಹೋದರು.

4. ಗಾಯ ಆದವರು ಎಲ್ಲರೂ ಉಪಚಾರಕ್ಕೆಂದು ಹಾರೂಗೇರಿಯಲ್ಲಿರವ ನಾರಗೊಂಡ ಆಸ್ಪತ್ರೆಗೆ ಹೋಗಿ ದಾಖಲಾದೆವು .ನಾವು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಅಲ್ಲಿಗೆ ಹಾರೂಗೇರಿ ಪೋಲಿಸರು ಬಂದರು. ಅವರಿಗೆ ನಾನು ಪಿರ್ಯಾದಿಯನ್ನು ಬರೆಸಿಕೊಟ್ಟರುತ್ತೇನೆ. ಪಿರ್ಯಾದಿಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಪಿರ್ಯಾದಿಯಾಗಿದ್ದು, ಅದನ್ನು ನಿಪಿಃ1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿಃ1 ಎ ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮಧ್ಯಾಹ್ನ ಅವಧಿ ಸಮಯ ಮುಗಿದಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಗಾಗಿ ಪ್ರಕರಣವನ್ನು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನ ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.